ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ಚಟುವಟಿಕೆ/02/2019-20

ನಿರ್ದೇಶಕರರವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 21-01-2022

**ಸುತ್ತೋಲೆ**

ವಿಷಯ: 2021-22 ನೇ ಸಾಲಿನ ರಾ.ಸೇ.ಯೋ ಅಧಿಕಾರಿ/ಸ್ವಯಂ ಸೇವಕರಿಂದ ಮಾಡಲಾದ ಸಮಾಜಮುಖಿ ಯೋಜನೆ (Project) ಗಳಿಗೆ ನೀಡಲಾಗುವ ಉತ್ತಮ ಸಮಾಜಮುಖಿ ಯೋಜನೆ ಪ್ರಶಸ್ತಿಗೆ ಪ್ರಸ್ತಾವನೆಗಳನ್ನು ಸಲ್ಲಿಸುವ ಕುರಿತು.

ಉಲ್ಲೇಖ: ತಾ.ಶಿ.ನಿ ರಾ.ಸೇ.ಯೋ ಸಲಹಾ ಸಮಿತಿ ನಡಾವಳಿ 2021-22

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ತಾಂತ್ರಿಕ ಪಠ್ಯಗಳ (Course) ಅಧ್ಯಾಯನವನ್ನು ಮುಂದುವರೆಸಿ ಅದರಿಂದ ಆವಿಷ್ಕಾರಕ ಅಂಶಗಳನ್ನು ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳಿಂದ ಹೊರತರುವ ದೃಷ್ಠಿಯಿಂದ "ಉತ್ತಮ ಸಮಾಜಮುಖಿ ಯೋಜನೆ" (ಒಟ್ಟು ಮೂರು) ಪ್ರಶಸ್ತಿಗಳನ್ನು ನೀಡಲಾಗುವುದು. ಈ ನಿಟ್ಟಿನಲ್ಲಿ ಪ್ರತಿಭೆಗಳನ್ನು ಗುರುತಿಸಿ ಪುರಸ್ಕರಿಸಲು ಇಲಾಖೆಯ ರಾ.ಸೇ.ಯೋನ ಸಲಹಾ ಸಮಿತಿಯು ಯೋಚಿಸಿರುವುದು ತುಂಬ ಹರ್ಷದಾಯಕ ವಿಚಾರವಾಗಿರುತ್ತದೆ. ಇದರಿಂದ ತಾಂತ್ರಿಕ ವಿಚಾರಗಳನ್ನು ಸಮಾಜಿಕ ಹಾಗೂ ಮಾನವಿಯ ಉಪಯೋಗಗಳಿಗೆ/ಅವಶ್ಯಕತೆಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳ ತಾಂತ್ರಿಕ ಜ್ಞಾನವನ್ನು ಬಳಸಲು ಹಾಗೂ ವಿದ್ಯಾರ್ಥಿಗಳ ಚಿಂತನೆಗಳನ್ನು ಸಮಾಜಮುಖಿ/ರಾಷ್ಟ್ರಮುಖಿ ಮಾಡುವುದು ಇಲಾಖೆಯ ರಾ.ಸೇ.ಯೋ ಕೋಶದ ಉದ್ದೇಶವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ರಾ.ಸೇ.ಯೋ ಘಟಕಗಳಿಂದ ವಿವಿಧ ತಾಂತ್ರಿಕ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ಆಧ್ಯತೆಯುಳ್ಳ ಯೋಜನೆ (Project)ಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ ವಸ್ತು ನಿಷ್ಠೆಯುಳ್ಳ ಪ್ರಾತ್ಯಕ್ಷಿಕೆ (CD/DVD/ಯಾವುದೇ ವಿದ್ಯುನ್ಮಾನ ಸ್ವರೂಪ) ಅನ್ನು ಈ ಸುತ್ತೋಲೆಯಲ್ಲಿ ತಿಳಿಸಿದ ಅಂಶಗಳನ್ನೊಳಗೊಂಡ 10 ಪುಟಗಳಿಗೆ ಸೀಮಿತಗೊಳಿಸಿ ಪುಸ್ತಕ ರೂಪದ ವರದಿಯನ್ನು ಇಲಾಖೆಯ ರಾ.ಸೇ.ಯೋ ಕಛೇರಿಗೆ ದಿನಾಂಕ: 07-03-2022 ರ ಒಳಗಾಗಿ ಸಲ್ಲಿಸಲು ಸೂಚಿಸಲಾಗಿದೆ.

ವರದಿಯ ಅಂಶಗಳು:

1. ರಾ.ಸೇ.ಯೋ ಘಟಕ ಅಸ್ತಿತ್ವಕ್ಕೆ ಬಂದು ಈವರೆಗೂ ಸಕ್ರೀಯವಾಗಿರುವ ಕುರಿತು ಪ್ರಾಚಾರ್ಯರ ದೃಢೀಕರಣ ಪತ್ರ
2. ಕಾರ್ಯಕ್ರಮಾಧಿಕಾರಿಯವರ ವಿವರ
3. ಯೋಜನೆ(Project)ಯ ಮುಖ್ಯ ಉದ್ದೇಶ
4. ವಿಧಾನ (Methodology)
5. ಯೋಜನೆಯ ಫಲಿತಾಂಶ (Outcomes)

ನಿರ್ದೇಶಕರು

ಇವರಿಗೆ,

ತಾಂತ್ರಿಕ ಶಿಕ್ಷಣ ಇಲಾಖೆಗೆ ಒಳಪಡುವ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಗಳ ಪ್ರಾಚಾರ್ಯರಿಗೆ -ಸೂಕ್ತ ಕ್ರಮಕ್ಕಾಗಿ

ಪ್ರತಿ: 1) ಇ-ಆಡಳಿತ ಇಲಾಖಾ ಅಂತರ್ ಜಾಲತಾಣದಲ್ಲಿ ಪ್ರಕಟಿಸಲು
2) ಕಛೇರಿ ಪ್ರತಿ